**ಪ್ರಥಮ ಆಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ.**

**ಸಿ.ಸಿ.ನಂ.1480/2022**

ಪಿರ್ಯಾದುದಾರರು : ದೊಡವಾಡ ಪೊಲೀಸ ಠಾಣೆ

**ವಿರುದ್ದ**

ಆರೋಪಿ ಹೆಸರುಃ ನಿಂಗಪ್ಪ @ ಮುದಕಪ್ಪ ಕಡ್ಡೆನ್ನವರ

**ದಂಡ ಪ್ರಕ್ರೀಯಾ ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿ ಹೇಳಿಕೆ**

ಪ್ರಶ್ನೆ 1. ಪ್ರಾಸಾ-1 ಪ್ರವೀಣ ಮಹಂತೇಶ ಪಠಾತ ರವರು ತಮ್ಮ ಸಾಕ್ಷದಲ್ಲಿ ಮೃತ ಮಹಂತೇಶ ಇವರು ತನ್ನ ತಂದೆ, ದಿಃ08.03.2022 ರಂದು ರಾತ್ರಿ 10.00 ಗಂಟೆಗೆ ಚಾಸಾ-7 ರವರು ತನಗೆ ಪೋನ ಮಾಡಿ ರಾತ್ರಿ 8.00 ಗಂಟೆ ಸುಮಾರಿಗೆ ಬೆಳವಡಿ ರಸ್ತೆಯಲ್ಲಿ ಖಂಡೋಜಿ ಅವರ ಹೋಲದ ಹತ್ತಿರ ಆರೋಪಿಯು ತಾನು ಚಲಾಯಿಸುತ್ತಿದ್ದ ಮೋಟರ ಸೈಕಲ ನಂ.ಕೆಎ-24/ಎಕ್ಸ 9158 ರ ಮೇಲೆ ತನ್ನ ತಂದೆಯನ್ನು ಕೂಡಿಸಿಕೊಂಡು ಬರುವಾಗ ಅಪಘಾತವಾಗಿರುತ್ತದೆ ಎಂದು ತನಗೆ ತಿಳಿಸಿರುತ್ತಾರೆ. ರಸ್ತೆಯ ಪಕ್ಕ ಇರುವ ಗೂಟಕಲ್ಲಿಗೆ ಹಾಯಿಸಿ ಅಪಘಾತವಾಗಿ ನಿಮ್ಮ ತಂದೆಗೆ ಭಾರಿ ಪೆಟ್ಟಾಗಿರುತ್ತದೆ ಕಾರಣ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿರುತ್ತೇವೆ ಎಂದು ತಿಳಿಸಿರುತ್ತಾರೆ. ನಂತರ ಚಾಸಾ-7 ರವರು ತಮ್ಮ ತಂದೆಯನ್ನು ಬೆಳಗಾವಿ ಆಸ್ಪತ್ರೆಗೆ ಸೇರಿಕೆ ಮಾಡಿ ಸುದ್ದಿ ತಿಳಿದು ತಾವು ಬೆಂಗಳೂರಿನಿಂದ ಬೆಳಗಾವಿಗೆ ಬಂದಿರುತ್ತೇವೆ. ಅಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ತನ್ನ ತಂದೆಯನ್ನು ನೋಡಲಾಗಿ ಸದರಿಯವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆರೋಪಿಗೂ ಸಹಾ ಸಣ್ಣ ಪುಟ್ಟ ಪೆಟ್ಟಾಗಿದ್ದವು. ನಂತರ ತಮ್ಮ ತಂದೆಯನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು ನಂತರ ತಾವು ದೊಡವಾಡ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ನಂತರ ಚಿಕಿತ್ಸೆ ಫಲಿಸದೇ ತನ್ನ ತಂದೆ ಮರಣ ಹೊಂದಿರುತ್ತಾರೆ. ಈ ಕುರಿತು ತಾನು ಪೊಲೀಸರಿಗೆ ಮರುಹೇಳಿಕೆಯನ್ನು ನೀಡಿರುತ್ತೇನೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ತನಗೆ ಗೊತ್ತಾಗಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 2. ಪ್ರಾ.ಸಾ-7 ಮಹಾಂತೇಶ @ ಮುತ್ತು ಮಡ್ಯಪ್ಪ ಕಾಡೇಶನವರ ರವರು ತಮ್ಮ ಸಾಕ್ಷದಲ್ಲಿ ಚಾಸಾ-1 ಅವರು ತನ್ನ ಅಳಿಯ, ಚಾಸಾ-6 ತನ್ನ ಅಕ್ಕ, ಚಾಸಾ-7 ತನ್ನ ಮಾವ, ಮೃತ ಮಹಾಂತೇಶ ಬಸಪ್ಪ ಪಟ್ಟಾದ ತನ್ನ ಮಾವ ಅವರು ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಆರೋಪಿ ಹಾಗೂ ಮೃತ ಮಹಾಂತೇಶ ಅವರು ಬೈಲಹೊಂಗಲದಿಂದ ಗುಡಿಕಟ್ಟಿಗೆ ಬೈಕ್ ನಲ್ಲಿ ಹೋಗುತ್ತಾ ಇದ್ದರು ಪಟ್ಟಿಹಾಳ ಕ್ರಾಸ್ ನಲ್ಲಿ ಅಪಘಾತ ಆಗಿರುತ್ತದೆ. ಚಾಸಾ-7 ಅವರು ತನಗೆ ಪೋನ್ ಹಚ್ಚಿ ಅಪಘಾತವಾಗಿರುವ ಬಗ್ಗೆ ತಿಳಿಸಿದರು. ಅಪಘಾತ ಹೇಗೆ ಆಗಿರುತ್ತದೆ ಎಂದು ತನಗೆ ಗೊತ್ತಿಲ್ಲ. ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ತನಗೆ ಗೊತ್ತಿಲ್ಲ. ತಾನು ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿಂದ ಬೆಳಗಾವಿಯ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿಂದ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಗೆ ಕಳುಹಿಸಿದರು. ತನ್ನ ಮಾವ ಮಹಾಂತೇಶ ಅವರಿಗೆ ಕಿವಿಗೆ, ಕಾಲಿಗೆ ಪೆಟ್ಟಾಗಿತ್ತು. ಆರೋಪಿಯ ವಿರುದ್ಧ ಚಾಸಾ-1 ಅವರು ದೂರು ನೀಡಿರುತ್ತಾರೆ. ಪೊಲೀಸರಿಗೆ ಹೇಳಿಕೆ ಹಾಗೂ ಮರು ಹೇಳಿಕೆ ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 3. ಪ್ರಾಸಾ-8 ಮೋಹನ್ ಶಂಕರ ಮಾವನಕರ್ ರವರು ತಮ್ಮ ಸಾಕ್ಷ್ಯದಲ್ಲಿ 2020 ರಿಂದ ಇಲ್ಲಿಯವರೆಗೂ ದೊಡವಾಡ ಪೋಲಿಸ ಠಾಣೆಯಲ್ಲಿ ಎ.ಎಸ್.ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿಃ09.03.2022 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಅಪಘಾತ ಸಂಬಂಧ ದೂರು ನೀಡಿರುತ್ತಾರೆ. ದೂರನ್ನು ಗುನ್ನಾ 17/2022 ಎಂದು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ತಮಗೆ ಕೆ ಎಮ್ ಸಿ ಹುಬ್ಬಳ್ಳಿಯಿಂದ ಎಮ್ ಎಲ್ ಸಿ ವರದಿ ಬಂದಿರುತ್ತದೆ. ದಿಃ10.03.2022 ರಂದು ಚಾಸಾ-2 ಮತ್ತು 3 ರವರ ಸಮಕ್ಷಮ ಅಪಘಾತ ಸ್ಥಳದ ಪಂಚನಾಮೆಯನ್ನು ಬೆಳಗ್ಗೆ 09.00 ರಿಂದ 09.45 ರವರೆಗೆ ಮಾಡಿರುತ್ತೇವೆ. ನಕ್ಷೆ ತಯಾರಿಸಿದೆವು. ಅದೇ ದಿನ ಅಪಘಾತಕ್ಕೆ ಒಳಗಾದ ವಾಹನ ತಡೆ ಪಂಚನಾಮೆಯನ್ನು ಚಾಸಾ-2 ಮತ್ತು 3 ರವರ ಸಮಕ್ಷಮ 10.00 ಗಂಟೆಯಿಂದ 10.30 ರವರಗೆ ಜರುಗಿಸಲಾಯಿತು. ಅದೇ ದಿನ 304ಎ ಅಳವಡಿಸಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿದೆ. ಶವ ಪಂಚನಾಮೆಯನ್ನು ಜರುಗಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ-1 ರವರ ಮರು ಹೇಳಿಕೆ ಪಡಿದಿರುತ್ತೇನೆ. ಚಾಸಾ-6 ರಿಂದ 9 ರವರ ಹೇಳಿಕೆ ಮತ್ತು ಮರುಹೇಳಿಕೆ ಪಡೆದಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ-16 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 4. ಪ್ರಾಸಾ-9 ಮಹಾಂತೇಶ ವೀರಪ್ಪ ಹೊಸಪೇಟಿ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ21.01.2022 ರಿಂದ 14.12.2023 ರವರೆಗೆ ಸಿಪಿಐ ಕಿತ್ತೂರು ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿಃ10.03.2022 ರಂದು ಈ ಪ್ರಕರಣದ ಕಡತವನ್ನು ಚಾಸಾ-15 ರವರಿಂದ ಪಡೆದು ಅದೇ ದಿನ ಚಾಸಾ-13 ಹಾಗೂ 14 ರವರು ನೀಡಿದ ವರದಿಗಳನ್ನು ಪಡೆದು ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ31.03.2022 ರಂದು ಚಾಸಾ-11 ರವರು ಪೂರೈಸಿದ ಮೃತನ ಪಿ ಎಮ್ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ದಿಃ02.04.2022 ರಂದು ಚಾಸಾ-12 ರವರು ಪೊರೈಸಿದಂತಹ ಯಾಂತ್ರಿಕ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಲಾಯಿತು. ದಿಃ05.04.2022 ರಂದು ಪ್ರಕರಣದ ಆರೋಪಿಯನ್ನು ದಸ್ತಗಿರಿ ಮಾಡಿ ಯೋಗ್ಯ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಅಪಘಾತಕ್ಕೆ ಸಂಬಂಧಿಸಿದ ಆರ್ ಸಿ ಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ಆರೋಪಿಯನ್ನು ವಾಹನ ಚಲಾಯಿಸಲು ಚಾಲನಾ ಪ್ರಮಾಣ ಪತ್ರ ಹಾಗೂ ವಾಹನದ ಇನ್ಸುರೇನ್ಸ ಕೇಳಲಾಗಿ ಇಲ್ಲ ಎಂದು ಹೇಳಿರುತ್ತಾರೆ. ಆದೇ ದಿನ ಪಿ ಎಫ್ ಅನ್ನು ನ್ಯಾಯಾಲಯಕ್ಕೆ ಕಳುಹಿಸಲಾಯಿತು. ದಿಃ18.07.2022 ರಂದು ಗಾಯದ ಪ್ರಮಾಣ ಪತ್ರವನ್ನು ಚಾಸಾ-10 ರಿಂದ ಪಡೆದು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು. ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಇದ್ದ ಕಾರಣ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ.5. ಈ ಪ್ರಕರಣದಲ್ಲಿ ನೀವು ಸ್ವ ಇಚ್ಛೆಯಿಂದ ಏನಾದರೂ ಹೇಳುವುದಿದೇಯಾ?

ಉತ್ತರಃ

ಪ್ರಶ್ನೆ.6. ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯಾ?

ಉತ್ತರಃ

(ಈ ಮೇಲ್ಕಂಡ ಅಪರಾಧವನ್ನು ಸೂಚಿಸುವ ಸಂಗತಿಗಳನ್ನು ಆರೋಪಿತರಿಗೆ ಅರ್ಥವಾಗುವ ಬಾಷೆಯಲ್ಲಿ ಬಹಿರಂಗ ನ್ಯಾಯಾಲಯದಲ್ಲಿ ಓದಿ, ವಿವರಿಸಿ ಅವರು ನೀಡಿದ ಉತ್ತರವನ್ನು ಯಥಾವತ್ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣಿಕರಿಸುತ್ತೆನೆ.)

ಸಹಿ/-

ದಿಃ 20.12.2025 **ಪ್ರ.ಆ.ದಿ.ನ್ಯಾ.ಪ್ರ.ದ.ನ್ಯಾ.ದಂಡಾಧಿಕಾರಿಗಳು. ಬೈಲಹೊಂಗಲ.**